ರೋಗಾಣುಗಳ ಸೋಂಕು, ಸ್ನಾಯು ವಿಕಾರ (ಲಿಗಮೆಂಟ್ಸ್ ಮತ್ತು ಕಾರ್ಟಿಲೇಜ್ ಸಮಸ್ಯೆ), ಪೆಟ್ಟು ಬೀಳುವುದು, ತೂಕದಲ್ಲಿ ಹೆಚ್ಚಳ, ಹೆಣ್ಣು ಮಕ್ಕಳಲ್ಲಿ ಹಾರ್ಮೋನ್ ಸಮಸ್ಯೆ.. ಇವೆಲ್ಲವೂ ಮಂಡಿನೋವಿಗೆ ಪ್ರಮುಖ ಕಾರಣಗಳು. ವಯಸ್ಸಾದಂತೆಲ್ಲಾ ಮೂಳೆಗಳ ಸವಕಳಿ ಹೊಂದಿದ್ದರೆ, ಸ್ನಾಯುಗಳು ಶಕ್ತಿ ಕಳೆದುಕೊಳ್ಳುತ್ತವೆ. ಸಂಧಿಯ ಮಧ್ಯಭಾಗದ ಹಾಸಿಗೆಯಂತಹ ಅಂಶವು ಕ್ಷೀಣಿಸುತ್ತಾ ಹೋಗುತ್ತದೆ. ಇದರಿಂದ ಮಂಡಿಯಲ್ಲಿ ಹಿಡಿದುಕೊಂಡಂತಹ ಅನುಭವ, ಚಲನೆಯಲ್ಲಿ ತೊಂದರೆ ಉಂಟಾಗುತ್ತದೆ. ಮಂಡಿ ಮೂಳೆ ಚಲಿಸಿದಾಗ ಕರ್ಕಶ ಶಬ್ದ, ಕಾಲಕ್ರಮೇಣ ಕಾಲುಗಳ ವಕ್ರತೆ.. ಹೀಗೆಲ್ಲಾ ಸಮಸ್ಯೆಗಳು ಉಂಟಾಗುತ್ತವೆ.

‘ಹೆಂಗಸರಲ್ಲಿ ಸಹಜವಾಗಿ ಮುಟ್ಟು ನಿಂತ ನಂತರ ಹಾರ್ಮೋನ್‌ಗಳ ವೈಪರೀತ್ಯದಿಂದ ಇದು ಹೆಚ್ಚಾಗಿ ಕಂಡು ಬರುತ್ತದೆ. ಸಂಧಿವಾತದ ಮಂಡಿನೋವು ವಯಸ್ಸಾದವರಲ್ಲಿ ಹೆಚ್ಚಾಗಿ ಕಾಣಸಿಗುತ್ತದೆ. ಮಂಡಿನೋವು ಉಲ್ಬಣಗೊಂಡು ಮಾತ್ರೆ, ಇಂಜೆಕ್ಷನ್‌ಗಳಿಂದ ಗುಣಪಡಿಸಲಾಗದ ಸಂದರ್ಭ ಬಂದರೆ ಸಂಪೂರ್ಣ ಮಂಡಿ ಬದಲಾವಣೆ (ಟೋಟಲ್ ನೀ ಆರ್ಥೋಪ್ಲಾಸ್ಟಿ) ಎಂಬ ಚಿಕಿತ್ಸಾ ವಿಧಾನ ಉತ್ತಮ ಪರಿಹಾರ. ಇದರಿಂದ ಹಾನಿಗೊಳಗಾದ ಮಂಡಿ ಚಿಪ್ಪನ್ನು ಬದಲಾಯಿಸಿ ನೋವು ಉಪಶಮನಗೊಳಿಸಬಹುದು. ತೊಂದರೆಗೊಳಗಾದ ಮೊಣಕಾಲಿನ ಭಾಗವನ್ನು ಲೋಹ ಮತ್ತು ಪ್ಲಾಸ್ಟಿಕ್ ಘಟಕಗಳಿಂದ ತಯಾರಿಸಲ್ಪಟ್ಟ ಸಾಧನವನ್ನು ಅಳವಡಿಸುವ ಮೂಲಕ ಬದಲಾಯಿಸಲಾಗುತ್ತದೆ. ಈ ಶಸ್ತ್ರಚಿಕಿತ್ಸೆ ಉತ್ತಮ ಫಲಿತಾಂಶ ನೀಡುತ್ತದೆ. ರೋಗಿ ಬೇಗನೆ ಸಂಪೂರ್ಣವಾಗಿ ಗುಣಮುಖನಾಗಿ ಮೊದಲಿನಂತೆ ನಡೆದಾಡುವಂತಾಗುತ್ತಾನೆ’ ಎಂದು ವಿವರಿಸುತ್ತಾರೆ ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಫೋರ್ಟಿಸ್ ಆಸ್ಪತ್ರೆಯ ಎಲುಬು, ಕೀಲುಗಳ ಶಸ್ತ್ರಚಿಕಿತ್ಸಾ ತಜ್ಞ ಡಾ.ಜೆ.ವಿ.ಶ್ರೀನಿವಾಸ್.

ರಾಷ್ಟ್ರೀಯ ಆರೋಗ್ಯ ಸಂಸ್ಥೆ (ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್) ಅಧ್ಯಯನದ ಪ್ರಕಾರ ಈ ಚಿಕಿತ್ಸೆಯನ್ನು ಪಡೆದುಕೊಂಡ 10 ರೋಗಿಗಳ ಪೈಕಿ 9 ರೋಗಿಗಳು ಸಂಪೂರ್ಣ ಗುಣಮುಖರಾಗಿ ಮೊದಲಿನಂತೆ ಸುಗಮ ಜೀವನ ನಡೆಸುತ್ತಿದ್ದಾರೆ ಎಂಬುದು ಆಶಾದಾಯಕ ವಿಚಾರ.

‘ಒಮ್ಮೆ ಮಂಡಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಗುಣಮುಖನಾದರೆ ಆಮೇಲೆ ದೈನಂದಿನ ಕೆಲಸ, ನಡಿಗೆ, ಕೈತೋಟದ ಕೆಲಸಗಳು, ವಸ್ತುಗಳನ್ನು ಮೇಲಕ್ಕೆತ್ತುವುದು, ಚಕ್ಕಳಮಕ್ಕಳ ಹಾಕಿ ಕುಳಿತುಕೊಳ್ಳುವುದು ಮುಂತಾದ ಯಾವುದೇ ರೀತಿಯ ಕೆಲಸಗಳನ್ನು ಸುಲಭವಾಗಿ ಮಾಡಲು ಸಾಧ್ಯವಾಗುತ್ತದೆ’ ಎಂದು ಅವರು ಹೇಳುತ್ತಾರೆ.



## ಮಹಿಳೆಯರೇ ಹೆಚ್ಚು

ಮಹಿಳೆಯರಲ್ಲಿ ಮಂಡಿನೋವಿನ ಸಮಸ್ಯೆ ಹೆಚ್ಚು. ಇತ್ತೀಚಿನ ಸಮೀಕ್ಷೆ ಪ್ರಕಾರ ದೇಶದಲ್ಲಿ ಶೇ.60ರಿಂದ 70ರಷ್ಟು ಮಹಿಳೆಯರು ಮಂಡಿ ಮರುಜೋಡಣೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದಾರೆ. ಇದರಲ್ಲೂ 55ರಿಂದ 60 ವರ್ಷ ವಯಸ್ಸಿನ ಮಹಿಳೆಯರಲ್ಲಿ ಈ ಸಮಸ್ಯೆ ತುಂಬ ಹೆಚ್ಚು. ಹಾಗೆಂದು ಚಿಕ್ಕ ವಯಸ್ಸಿನವರಲ್ಲಿ ಸಮಸ್ಯೆ ಇಲ್ಲವೆಂದಲ್ಲ. 30ರಿಂದ 40 ವರ್ಷ ವಯಸ್ಸಿನ ಮಹಿಳೆಯರೂ ಮಂಡಿ ಮರುಜೋಡಣೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದಾರೆ.

ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ ಏಳು ಕೋಟಿಗೂ ಹೆಚ್ಚು ಮಂದಿ ಮಂಡಿ ನೋವಿನಿಂದ ಬಳಲುತ್ತಿದ್ದಾರೆ. ಸುಮಾರು ನಾಲ್ಕೂವರೆ ಲಕ್ಷ ಮಂದಿ

